ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2121/2019

ಚಾಸಾ:3 ಪ್ರಾಸಾ:3

ದಿನಾಂಕ: 14.02.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಗಾಯತ್ರಿ |
| ಗಂಡನ ಹೆಸರು | : | ಮೋಹನ ಪೂಜಾರಿ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಅಂಗನವಾಡಿ ಸಹಾಯಕಿ |
| ವಾಸ ಸ್ಥಳ | : | ಹರ್ಕೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 27-05-2019ರ ಅಶೋಕ ಶೆಟ್ಟಿರವರ ಮನೆಯಲ್ಲಿ ಬರ್ತಡೆ ಪಾರ್ಟಿಗೆಂದು ಪ್ರಾಸಾ-1ರವರು ಹೋಗಿದ್ದು, ಅದೇ ದಿನ ದಿನೇಶ್ ಶೆಟ್ಟಿ, ರಾಜು ಶೆಟ್ಟಿ ಮತ್ತು ಪ್ರಾಸಾ-1ರವರು ನೀವು ಒಟ್ಟಿಗೆ ಹೋಗುತ್ತೀರಾ ಎಂದು ಕೇಳಿದಾಗ ನಾಳೆ ಮನೆಯ ಬಳಿ ಬರುತ್ತೇವೆ, ನಾಳೆ ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ. ದಿ: 28-05-2019 ರಂದು ನಾನು, ಚಾಸಾ-2 ಮತ್ತು ಚಾಸಾ-1 ಎಲ್ಲರೂ ಸಂಜೆ 7-30ರ ಸಮಯದಲ್ಲಿ ಟಿವಿ ನೋಡುತ್ತಿದ್ದಾಗ ಆರೋಪಿತರೆಲ್ಲರೂ ನಮ್ಮ ಮನೆಯ ಒಳಗೆ ಬಂದು ಚಾಸಾ-1ರವರನ್ನು ಅವಾಚ್ಯವಾಗಿ ನಿಂಧಿಸಿ ಹೊರಗೆ ಬಾ ಎಂದು ಹೇಳಿ ಅಂಗಿಯ ಕತ್ತು ಪಟ್ಟಿಗೆ ಕೈ ಹಾಕಿ ಪ್ರಾಸಾ-1ರವರನ್ನು ಹೊಡೆದಿರುತ್ತಾರೆ. ಅನಂತರ ಆತನನ್ನು ಹೊರಗೆ ಎಳೆದುಕೊಂಡು ಬರುತ್ತಿದ್ದಾಗ ನಾನು ಮತ್ತು ಚಾಸಾ-2ರವರು ಕೂಗಾಡಿ ತಪ್ಪಿಸಲು ಹೋದಾಗ 1ನೇ ಆರೋಪಿ ಚಾಸಾ-2ರವರಿಗೆ ಕೆನ್ನೆಗೆ ಹೊಡೆದಿರುತ್ತಾರೆ.

ಅನಂತರ 3ನೇ ಆರೋಪಿ ಮರದ ತುಂಡಿನಿಂದ ಚಾಸಾ-1ರವರ ತಲೆಗೆ ಹೊಡೆದಿರುತ್ತಾರೆ. ಚಾಸಾ-1ರವರಿಗೆ 1ನೇ ಆರೋಪಿ ಕಾಯಿ ಸುಲಿಯುವ ಜಾಕ್ ನಿಂದ ತಲೆಗೆ ಹೊಡೆದಿರುತ್ತಾರೆ. ನಾನು

ಮಗುವನ್ನು ಹಿಡಿದುಕೊಂಡು ಗಲಾಟೆಯನ್ನು ತಪ್ಪಿಸಲು ಹೋದಾಗ ನಾನು ಧರಿಸಿದ್ದ ಬಳೆಗಳು ಒಡೆದು ಹೋಗಿರುತ್ತದೆ. ನಾನು ಕೂಗಾಡಿದ ನಂತರ ಆರೋಪಿತರು  ಜಾಕ್, ಮರದ ತುಂಡುಗಳನ್ನು ಅಲ್ಲೇ ಎಸೆದು ವಿಚಾರವನ್ನು ಯಾರಿಗಾದರೂ ಹೇಳಿದರೆ ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಸಿ ಹೋಗಿರುತ್ತಾರೆ.

ಅನಂತರ ನಾನು ಚಾಸಾ-4ರವರಿಗೆ ಕರೆ ಮಾಡಿ ಚಾಸಾ-1ರವರನ್ನು  ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ಚಾಸಾ-1ರವರು ಆಸ್ಪತ್ರೆಯಲ್ಲಿ ದೂರು ನೀಡಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಮುಮಾ1 ರಿಂದ 3 ಹಾಗೂ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ  ಹೆಚ್ ಆರ್ ಎಸ್ ರವರಿಂದಃ**

ನಾವು ಈಗ ಆಲೂರಿನಲ್ಲಿ ವಾಸವಿದ್ದೇವೆ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಪೊಲೀಸರು ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ.  ಅದನ್ನು ನಾನು ಓದಿ ನೋಡಿಲ್ಲ. ಸದ್ರಿ ಹೇಳಿಕೆಯಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಹೇಳಲಾಗುವುದಿಲ್ಲ ಕಾರಣ ನನಗೆ ತಿಳಿದಿಲ್ಲ. ಪೊಲೀಸರು ಬಂದು ನನ್ನನ್ನು  ವೈಯಕ್ತಿಕವಾಗಿ ತನಿಖೆ ಮಾಡಿಲ್ಲ. ಪ್ರಕರಣ ದಾಖಲಾದ ಬಗ್ಗೆ ಚಾಸಾ-1ರವರು ತಿಳಿಸಿದ ನಂತರ ನನಗೆ ಗೊತ್ತಾಯಿತು ಎಂದರೆ ಸರಿ.

ನಾವು ವಾಸವಿರುವ ಮನೆ ಚಾಸಾ-2ರವರ ಹೆಸರಿಗೆ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿಲ್ಲ.  ಆರೋಪಿತರ ಪೈಕಿ ನನಗೆ 1 ಮತ್ತು 2ನೇ ಆರೋಪಿತರ ಪರಿಚಯವಿದೆ. ಘಟನೆ ನಡೆಯುವ ಮೊದಲು 1 ಮತ್ತು 2ನೇ ಆರೋಪಿತರು ಮತ್ತು ಪ್ರಾಸಾ-1ರವರು ಹೊಟೇಲ್ ನ್ನು ಹೊಸಪೇಟೆಯಲ್ಲಿ ನಡೆಸುತ್ತಿದ್ದರು ಎಂದರೆ ಸರಿ.  ಚಾಸಾ-1ರವರ ಅಣ್ಣ ಹೊಟೇಲ್ ನಡೆಸಲು 1ನೇ ಆರೋಪಿಯಿಂದ ವಹಿಸಿಕೊಂಡಿರುತ್ತಾರೆ ಎಂದರೆ ಸರಿ. ಅವರು ಆರೋಪಿತರೊಂದಿಗೆ ಒಟ್ಟಾಗಿ ಕೆಲಸ ಮಾಡುತ್ತಿರಲಿಲ್ಲ ಆದರೆ ಹೊಸಪೇಟೆಗೆ ಹೋಗಿ ಬರುತ್ತಿದ್ದರು.

ಸದ್ರಿ ಹೊಟೇಲ್ ನ್ನು ಚಾಸಾ-1 ಮತ್ತು ಆತನ ಅಣ್ಣ ಒಟ್ಟಾಗಿ ವಹಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಹೊಟೇಲ್ ನ್ನು ವಹಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಚಾಸಾ-1 ಮತ್ತು ಆತನ ಅಣ್ಣ ರೂಪಾಯಿ 80,000/-ನ್ನು 1ನೇ ಆರೋಪಿಗೆ ಕೊಡಲು ಬಾಕಿ ಇತ್ತು ಎಂದರೆ ಸರಿಯಲ್ಲ. ಅಶೋಕ ಶೆಟ್ಟಿರವರ ಕಾರ್ಯಕ್ರಮದಲ್ಲಿ ಸದ್ರಿ ಹಣವನ್ನು ಯಾವಾಗ ಹಿಂದಿರುಗಿಸಿರುತ್ತೀರಿ ಎಂದು ಪ್ರಶ್ನಿಸಿದ್ದು ಮಾತ್ರ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಹಣವನ್ನು ಹಿಂದಿರುಗಿಸಲು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು, ಚಾಸಾ-1 ಮತ್ತು 2ರವರುಹಾಗೂ ನನ್ನ ಭಾವನವರು ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಗಲಾಟೆ ನಡೆದ ದಿನ ನಾನು ಮನೆಯಲ್ಲಿ ಇದ್ದೆ. ಆಗ ರಾತ್ರಿ ಕತ್ತಲೆಯಾಗಿತ್ತು. ಘಟನೆಯ ದಿನ ಪ್ರಾಸಾ-1ರವರು ಟೀ ಶರ್ಟ್ ನಲ್ಲಿ ಇದ್ದರು. ಆ ಸಮಯದಲ್ಲಿ ನಾನು ಅಡುಗೆ ಮನೆಯಲ್ಲಿ ಇದ್ದು ಚಾಸಾ-2 ರವರು ದೇವರ ಪೂಜೆ ಮಾಡುತ್ತಿದ್ದರು. ಆದ್ದರಿಂದ ಆರೋಪಿತರ ಪೈಕಿ ಯಾರು ಯಾವಾಗ ಬಂದರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಸುಮಾರು ಅರ್ಧ ಗಂಟೆಗಳ ಕಾಲ ಗಲಾಟೆಯಾಗಿರುತ್ತದೆ. ಸದ್ರಿ ದಿನ ನಾನು ಒಬ್ಬಳೇ ಇದ್ದೆ. ನಮ್ಮ ಅಕ್ಕಪಕ್ಕದಲ್ಲಿ ಮನೆಗಳು ಇಲ್ಲ. 50 ಮೀಟರ್ ದೂರದಲ್ಲಿ ಮನೆಗಳು ಇವೆ.

ಗಲಾಟೆಯು ಮನೆಯ ಒಳಗೆ ಆಗಿರುತ್ತದೆ. ಅನಂತರ ಮನೆಯ ಅಂಗಳದಲ್ಲಿ ಹೊಡೆದಿರುತ್ತಾರೆ. ಸುಮಾರು 3-4 ಪೆಟ್ಟು ಹೊಡೆದಿರುತ್ತಾರೆ. ಚಾಸಾ-1ರವರಿಗೆ ಮುಮಾ2 ರಿಂದ ಭುಜಕ್ಕೆ ಹೊಡೆದಾಗ ಮೂಳೆ ಮುರಿತವಾಗಿರುತ್ತದೆ. ಎಲ್ಲರೂ ಸೇರಿ ಮುಮಾ2 ನ್ನು ತೆಗೆದು ಹೊಡೆದಿರುತ್ತಾರೆ. ಮುಮಾ1 ರಿಂದ ಹೊಡೆದಾಗ ರಕ್ತಗಾಯವಾಗಿರುತ್ತದೆ. ಪ್ರಜ್ಞೆ ತಪ್ಪಿ ಹೋಗಿತ್ತು. ಚಾಸಾ-1ರವರ ತಲೆಯಿಂದ ರಕ್ತ ಮುಮಾ1ಕ್ಕೆ ತಾಗಿ ನೆಲಕ್ಕೂ ಬಿದ್ದಿತ್ತು. ಆತ ಧರಿಸಿದ್ದ ಟೀ ಶರ್ಟ್ ಗೂ ರಕ್ತ ತಾಗಿತ್ತು. ಆಸ್ಪತ್ರೆಗೆ ಹೋಗುವವರೆಗೂ ಚಾಸಾ-1 ಮತ್ತು 2 ಇಬ್ಬರಿಗೂ ಪ್ರಜ್ಞೆ ತಪ್ಪಿತ್ತು. ಇಬ್ಬರನ್ನೂ ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-2ರವರು 3 ದಿನ ಆಸ್ಪತ್ರೆಯಲ್ಲಿ ಇದ್ದರು. ಚಾಸಾ-1ರವರಿಗೆ ಅದೇ ದಿನ ಪ್ರಜ್ಞೆ ಬಂದಿರುತ್ತದೆ.

ಮನೆಯ ಒಳಗೆ ವಿದ್ಯುತ್ ಸಂಪರ್ಕ ಇದ್ದು ಹೊರಗೆ ಅದರ ಬೆಳಕು ಕಾಣುತ್ತದೆ. ಅನಂತರದಲ್ಲಿ ಯಾವುದೇ ಮಾತುಕತೆಯಾಗಿರುವುದಿಲ್ಲ. ನಾನು ಕೂಗಾಡುವುದನ್ನು ಕೇಳಿ ಅಕ್ಕಪಕ್ಕದ ಮನೆಯವರು ಬಂದಿರುವುದಿಲ್ಲ. ಇಬ್ಬರು ಆರೋಪಿತರನ್ನು ಬಿಟ್ಟು ಉಳಿದವರ ಬಗ್ಗೆ ನನಗೆ ತಿಳಿದಿಲ್ಲ ಎಂದರೆ ಸರಿ.

ಮೇಲೆ ಹೇಳಿದ ಸ್ಥಳ ಹಾಗೂ ದಿನಾಂಕದಂದು ಆರೋಪಿತರು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ಸ್ಥಳ ವಾಸದ ಮನೆ ಅಲ್ಲ ಎಂದರೆ ಸರಿಯಲ್ಲ. ಅದು ವಾಸದ ಮನೆ ಅಲ್ಲದ ಕಾರಣ ಪೊಲೀಸರಿಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ದಿನ ಯಾವುದೇ ಘಟನೆ ಜರುಗಿಲ್ಲದೆ ನನ್ನ ಕುಟುಂಬಸ್ಥರು ಮಾತ್ರ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಮುಮಾ1 ರಿಂದ 3 ಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮುಮಾ2 ಬಾವಿಗೆ ಹಾಕಲು ತಂದಿಟ್ಟಿದ್ದು ಅದಕ್ಕೆ ಯಾವುದೇ ರಕ್ತ ತಾಗಿರಲಿಲ್ಲ. ಆದ್ದರಿಂದ ಗುರುತು ಇಲ್ಲ. ಮನೆಯಲ್ಲಿ ಇದ್ದ ಮರದ ತುಂಡನ್ನು ಪೊಲೀಸರಿಗೆ ಈ ಪ್ರಕರಣದ ಸಂಬಂಧ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ತಮಗೆ ಬರಬೇಕಾಗಿದ್ದ ಹಣ ಕೇಳಿದ ಕಾರಣ ಅವರ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**